


International Journal of Kannada Research
www.kannadajournal.com

ISSN: 2454–5813
IJKR 2025; 11(2): 137-140
© 2025 IJKR
www.kannadajournal.com
Received: 01-02-2025
Accepted: 04-03-2025

**ಡಾ. ರೂಪ ಎಂ.ಪಿ.**
ಕನ್ನಡ ಸಹ ಪ್ರಾಧ್ಯಾಪಕರು.
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಬಿಡದಿ, ಕರ್ನಾಟಕ,
ಭಾರತ

**Corresponding Author:**
**ಡಾ. ರೂಪ ಎಂ.ಪಿ.**
ಕನ್ನಡ ಸಹ ಪ್ರಾಧ್ಯಾಪಕರು.
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಬಿಡದಿ, ಕರ್ನಾಟಕ,
ಭಾರತ

# ಕನ್ನಡ ಸಾಹಿತ್ಯದಲ್ಲಿ ಹಣದ ಪ್ರತಿನಿಧೀಕರಣ

**ರೂಪ ಎಂ.ಪಿ.**

**ಪೀಠಿಕೆ**

ಜಗತ್ತಿನಲ್ಲಿ ದುಡ್ಡಿಗೆ ತುಂಬಾ ಮಹತ್ವದ ಸ್ಥಾನವಿದೆ. ಜನಪದರು 'ದುಡ್ಡೇ ದೊಡ್ಡಪ್ಪ', 'ಕಾಸಿದ್ದರೆ ಕೈಲಾಸ' ಎಂಬ ಮಾತುಗಳನ್ನು ಹೇಳಿದ್ದಾರೆ. ನಾವು ಬಯಸಿದ್ದನ್ನೆಲ್ಲಾ ಪಡೆಯಬೇಕೆಂದಾದರೆ ಅದು ಹಣದಿಂದ ಮಾತ್ರ ಸಾಧ್ಯ. ವ್ಯಕ್ತಿ, ಕುಟುಂಬ,ದೇಶ,ಜಗತ್ತು ಇವುಗಳ ಚಾಲನೆಗೆ ಹಣ ಅತ್ಯವಶ್ಯಕ. ಹಣವಿದ್ದ ದೇಶಗಳು ಶ್ರೀಮಂತವೆಂತಲೂ ಹಣವಿಲ್ಲದ ದೇಶಗಳು ಬಡ ರಾಷ್ಟಗಳೆಂತಲೂ ಹಣದಿಂದಲೇ ಅಳತೆ ಮಾಡಲಾಗುತ್ತದೆ. ಬಡವ ಶ್ರೀಮಂತ ಎಂಬ ಭೇದಕ್ಕೂ ಹಣವೇ ಮೂಲಮಾನವಾಗಿದೆ. ಆಧುನಿಕ ಜಗತ್ತಿನಲ್ಲಿ ಹಣದ ನಿರ್ವಹಣೆ, ಸಂಗ್ರಹಣೆ, ವಿತರಣೆ ಕುರಿತಂತೆ ಅರ್ಥಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರಗಳೆಂಬ ಹೆಸರಿನಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಆಧುನಿಕ ಜಗತ್ತಿನಲ್ಲಿ ಬದುಕಬೇಕಾದರೆ ಹಣ ತುಂಬಾ ಅವಶ್ಯಕ ಎಂಬ ತೀರ್ಮಾನಕ್ಕೆ ಈ ಜಗತ್ತು ಬಂದು ನಿಂತಿದೆ. ಹಣ ಸಂಪಾದನೆಯೊಂದೇ ಜೀವನದ ಮುಖ್ಯ ಗುರಿ ಎಂದು ಯುವ ಸಮೂಹವು ತಿಳಿಯುತ್ತಿದೆ. ಸುಲಭ ಮಾರ್ಗದಲ್ಲಿ ಹಣ ಸಂಪಾದಿಸಲು ಅನ್ಯಾಯಯುತ ಮಾರ್ಗಗಳು ತೆರೆದುಕೊಳ್ಳುತ್ತಿವೆ. ಇಂತಹ ಸನ್ನಿವೇಶದಲ್ಲಿ ಕನ್ನಡ ಸಾಹಿತ್ಯ ಹಣವನ್ನು ಕುರಿತು ಯಾವ ರೀತಿ ವ್ಯಾಖ್ಯಾನ ಮಾಡುತ್ತಿತ್ತು ಎಂಬುದನ್ನ ಈ ಲೇಖನದ ಮೂಲಕ ತಿಳಿಯಬಹುದಾಗಿದೆ.

**ಬಸವಣ್ಣ:** ಹನ್ನೆರಡನೇ ಶತಮಾನದ ವಚನಕಾರ ಬಸವಣ್ಣನವರು ಹಣ ಉಳ್ಳವರ ಮತ್ತು ಇಲ್ಲದವರ ನಡುವಿನ ಭೇದವನ್ನು ಅಸಮಾನತೆಯನ್ನು ಚಿತ್ರಿಸುವ ವಚನಗಳನ್ನು ಬರೆದಿದ್ದಾರೆ. ಉಳ್ಳವರು ಶಿವಾಲಯ ಮಾಡುವರು ನಾನೇನ ಮಾಡಲಿ ಬಡವನಯ್ಯ ಎಂಬ ಮಾತುಗಳೇ ಬಡವ ಶ್ರೀಮಂತರ ನಡುವಿನ ಅಂತರವನ್ನು ಸೂಚಿಸುತ್ತದೆ. ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರವನ್ನು ತೊಲಗಿಸಲು ಹೋರಾಡಿದವರು ಬಸವಣ್ಣನವರು. ಹಣ (ಶ್ರೀಮಂತಿಕೆ) ಎಂಬುದು ಅತ್ಯಂತ ಅಪಾಯಕಾರಿ ಎಂಬುದನ್ನು ಅರಿತಿದ್ದವರು. ಬಸವಣ್ಣನವರ ಈ ವಚನ ಶ್ರೀಮಂತರ ವ್ಯಕ್ತಿತ್ವ ಹೇಗಿರುತ್ತದೆ ಎಂಬುದನ್ನು ಚಿತ್ರಿಸುತ್ತದೆ.

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರು, ಕೂಡಲಸಂಗಮದೇವ

ಹಣವಂತರ ಗುಣವನ್ನು ಕುರಿತು ಬಸವಣ್ಣನವರು ಉತ್ತಮ ಹೋಲಿಕೆಗಳ ಮುಖಾಂತರ ಇಲ್ಲಿ ತಿಳಿಸಿದ್ದಾರೆ. ವಿಷ ಸರ್ಪದಿಂದ ಕಚ್ಚಿದ ವ್ಯಕ್ತಿಯು ಮೂರ್ಛೆ ಹೋಗಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರೂ ಅವನನ್ನು ಮಾತನಾಡಿಸಬಹುದು. ದೇಹದ ಮೇಲೆ ದೆವ್ವ ಬಂದವರಂತೆ ವರ್ತಿಸುತ್ತಿರುವವರನ್ನು ಮಾತನಾಡಿಸಬಹುದು. ಆದರೆ ಶ್ರೀಮಂತಿಕೆಯ ಮದ ಏರಿದವರನ್ನು ಮಾತನಾಡಿಸಲು ಸಾಧ್ಯವಾಗುವುದಿಲ್ಲ. ಎಂದಿಗೆ ಅವರ ಶ್ರೀಮಂತಿಕೆ ಕಳೆದು ಬಡತನವು ಆವರಿಸುತ್ತದೊ ಆಗ ಮಾತ್ರ ಅವರನ್ನು ಮಾತನಾಡಿಸಬಹುದು ಎನ್ನುತ್ತಾರೆ.

**ಸರ್ವಜ್ಞ:** ಹದಿನಾರನೇ ಶತಮಾನದ ತ್ರಿಪದಿ ಕವಿ ಎಂದೆ ಹೆಸರಾದ ಸರ್ವಜ್ಞ ಹಣಕ್ಕಿರುವ ಮಹತ್ವವನ್ನು ಹಾಗೂ ಹಣವುಳ್ಳವರ ಕುರಿತು ಹೀಗೆ ಹೇಳಿದ್ದಾನೆ. ಹಣವುಳ್ಳವನಿಗೆ ಸಮಾಜದಲ್ಲಿ ಮನ್ನಣೆ ಹೆಚ್ಚು.

ಧನಕನಕವುಳ್ಳವನ ದಿನಕರನ ವೋಲಕ್ಕೂ
ಧನಕನಕ ಹೋದ ಮರುದಿನವೇ ಹಾಳೂರು
ಶುನಕನಂತಕ್ಕೂ ಸರ್ವಜ್ಞ

ಹಣ, ಆಸ್ತಿ, ಚಿನ್ನ ಉಳ್ಳವನನ್ನು ಸೂರ್ಯನಿಗೆ ಸಮವೆಂದು ಪೂಜಿಸುವ ಜನರು ಎಲ್ಲವನ್ನು ಕಳಕೊಂಡು ಭಿಕಾರಿಯದಾಗ ಹಾಳೂರ ನಾಯಿಗಿಂತಲೂ ಕಡೆಯಾಗಿ ಕಾಣುತ್ತಾರೆ. ಇದು ಸಮಾಜದಲ್ಲಿ ಹಣವಿದ್ದವನನ್ನು ಗೌರವಿಸುವ ಬಗೆಯನ್ನು ಹಾಗೆಯೇ ಹಣವಿಲ್ಲದವನನ್ನು ಕೀಳಾಗಿ ಕಾಣುವ ಜನರ ಪ್ರವೃತ್ತಿಯನ್ನು ತಿಳಿಸುತ್ತದೆ.

ಸಿರಿಯಣ್ಣನುಳ್ಳತನಕ ಹಿರಿಯಣ್ಣನೆನೆಸಿಪ್ಪ
ಸಿರಿಯಣ್ಣ ಹೋದ ಮರುದಿನವೆ ಹಿರಿಯಣ್ಣ
ನರಿಯಣ್ಣನೆಂದ ಸರ್ವಜ್ಞ

ಸರ್ವಜ್ಞನ ಈ ವಚನದಲ್ಲಿಯೂ ಕೂಡ ಸಂಪತ್ತು ಉಳ್ಳವನನ್ನು ಸಮಾಜ ಕಾಣುವ ರೀತಿ ಹಾಗೂ ಸಂಪತ್ತು ಇಲ್ಲದ ಬಡವನನ್ನು ಸಮಾಜ ಕಾಣುವ ರೀತಿಯನ್ನು, ಸಮಾಜ ಬಡವ ಮತ್ತು ಶ್ರೀಮಂತರಲ್ಲಿ ಉಂಟುಮಾಡಿರುವ ತಾರತಮ್ಯವನ್ನು ಸೂಚಿಸುತ್ತದೆ. ಸಿರಿಯಣ್ಣನೆಂದರೆ ಸಂಪತ್ತು. ಸಂಪತ್ತು ನಮ್ಮಲ್ಲಿರುವವರೆಗೂ ಸಮುದಾಯದೊಳಗೆ ಆತನೇ ಹಿರಿಯಣ್ಣ (ಯಜಮಾನ)ನಂತೆ, ದುರಾದೃಷ್ಟವಶಾತ್ ಸಂಪತ್ತು ನಾಶವಾದರೆ ಅದೇ ಹಿರಿಯಣ್ಣ ಯಾರಿಗೂ ಬೇಡವಾದ ನರಿಯಣ್ಣನಂತಾಗುತ್ತಾನೆ. ಈ ಸಮಾಜದಲ್ಲಿ ಹೆಂಡತಿ ಮಕ್ಕಳು ಸಹ ಹಣವಿದ್ದರೆ ಇರುತ್ತಾರೆ, ಇಲ್ಲವಾದರೆ ದೂರವಾಗುತ್ತಾರೆ. ಒಟ್ಟಾರೆ ಸರ್ವಜ್ಞನ ತ್ರಿಪದಿಗಳು ಸಮಾಜದಲ್ಲಿ ಶ್ರೀಮಂತನಿಗೂ ಬಡವನಿಗೂ ಇರುವ ಸ್ಥಾನಮಾನಗಳನ್ನು ತಿಳಿಸಿವೆ.

**ಪುರಂದರದಾಸರು:** 'ದಾಸರೆಂದರೆ ಪುರಂದರ ದಾಸರಯ್ಯ' ಎಂದೆನಿಸಿಕೊಂಡ ಪುರಂದರದಾಸರು ಹದಿನಾರನೇ ಶತಮಾನದವರು. ಸರ್ವಜ್ಞನ ಸಮಕಾಲೀನರು. ಪುರಂದರದಾಸರು ಹಣವನ್ನು ಕುರಿತಂತೆ ಎರಡು ಕೀರ್ತನೆಗಳನ್ನು ರಚಿಸಿದ್ದಾರೆ. ಎರಡು ಕೀರ್ತನೆಗಳಲ್ಲಿ ಹಣದಿಂದ ವ್ಯಕ್ತಿಗಾಗುವ ಅನುಕೂಲ ಮತ್ತು ಅನಾನುಕೂಲಗಳನ್ನು ಚಿತ್ರಿಸಿದ್ದಾರೆ. 'ರೊಕ್ಕ ಎರಡಕ್ಕೂ ದುಃಖ ಕಾಣಕ್ಕ', ಮತ್ತು 'ದುಗ್ಗಾಣಿಎಂಬುದು ದುರ್ಜನ ಸಂಗ' ಎಂಬ ಕೀರ್ತನೆಗಳಲ್ಲಿ ಹಣದಿಂದ ವ್ಯಕ್ತಿಗಾಗುವ ಅನುಕೂಲ ಮತ್ತು ಅನಾನುಕೂಲಗಳನ್ನು ಚಿತ್ರಿಸಿದ್ದಾರೆ. ದಾಸರು ಈ ಕೀರ್ತನೆಗಳಲ್ಲಿ ಹಣದ ಅನಿವಾರ್ಯತೆಯನ್ನು ತಿಳಿಸುತ್ತಲೇ ಅದರಿಂದ ಆಗುವ ಅನಾಹುತಗಳನ್ನು ಪಟ್ಟಿ ಮಾಡುತ್ತಾರೆ. ರೊಕ್ಕದ, ದುಗ್ಗಾಣಿಯ ಹಲವು ಮುಖಗಳನ್ನು ಪರಿಚಯಿಸುತ್ತಾರೆ. ಹಣವಿದ್ದಾಗಲೂ ಒಂದು ತರದ ದುಃಖ, ಹಣವಿಲ್ಲದಿದ್ದಾಗಲೂ ದುಃಖ ಎಂಬುದನ್ನು 'ರೊಕ್ಕ ಎರಡಕ್ಕೂ ದುಃಖ ಕಾಣಕ್ಕ' ಎಂಬ ಕೀರ್ತನೆಯ ಶೀರ್ಷಿಕೆ ಸೂಚಿಸುತ್ತದೆ.

ಇಲ್ಲದ ಗುಣಗಳ ತರಿಸೋದು ರೊಕ್ಕ
ಸಲ್ಲದ ನಾಣ್ಯವ ನಡೆಸೋದು ರೊಕ್ಕ
ಬೆಲ್ಲಕಿಂತಲೂ ಬಹು ಸವಿ ರೊಕ್ಕ
ಇಲ್ಲದಿರಲು ಬಹು ದುಃಖ ಕಾಣಕ್ಕ

ರೊಕ್ಕವಿದ್ದಾಗ ಸಂಸಾರ ಸುಗಮ, ಬಂಧು ಬಾಂಧವರೆಲ್ಲ ಹತ್ತಿರವಾಗುತ್ತಾರೆ, ಇಷ್ಟವಾದುದನ್ನೆಲ್ಲ ಪಡೆಯಬಹುದು, ವ್ಯಕ್ತಿಗೆ ಘನತೆ ಗೌರವಗಳನ್ನು ತಂದು ಕೊಡುವ ರೊಕ್ಕ ತಮ್ಮಿಂದ ದೂರವಾದರೆ ಮನುಷ್ಯ ಎಲ್ಲವನ್ನು ಕಳೆದುಕೊಂಡು ಅನಾಥನಂತೆ ದುಃಖಿಸಬೇಕಾಗುತ್ತದೆ ಎನ್ನುತ್ತಾರೆ.
'ದುಗ್ಗಾಣಿ ಎಂಬುದು ದುರ್ಜನ ಸಂಗ' ಎಂಬ ಪುರಂದರದಾಸರ ಈ ಕೀರ್ತನೆಯಲ್ಲಿ ದುಗ್ಗಾಣಿಯೊಂದಿಗಿನ ನಮ್ಮ ಬದುಕು ದುರ್ಜನೊಡನೆ ಸಹವಾಸವಿಟ್ಟುಕೊಂಡಂತೆ. ಇದು ನಮ್ಮನ್ನು ಹಾಳು ಮಾಡುತ್ತದೆ ಎನ್ನುತ್ತಾರೆ.

ಆಚಾರ ಹೇಳೋದು ದುಗ್ಗಾಣಿ, ಬಹು
ನೀಚರ ಮಾಡೋದು ದುಗ್ಗಾಣಿ
ನಾಚಿಕೆ ಇಲ್ಲದೆ ಮನೆಮನೆ ತಿರುಗಿಸಿ
ಛೀಛೀಎನಿಸೋದು ದುಗ್ಗಾಣಿಯಣ್ಣ

ದುಗ್ಗಾಣಿ ನಮ್ಮನ್ನು ಅದರ ತಾಳಕ್ಕೆ ತಕ್ಕಂತೆ ಕುಣಿಸುತ್ತದೆ. ದುಗ್ಗಾಣಿಯಿಂದಲೇ ಒಳ್ಳೆಯದಾಗುತ್ತದೆ ಆದರೆ ಅದಕ್ಕಿಂತಲೂ ಹೆಚ್ಚಾಗಿ ಕೆಡುಕು ಉಂಟಾಗುತ್ತದೆ. ತಮ್ಮ ವ್ಯಕ್ತಿತ್ವ ಮರೆತು ಅಂಡಲೆಯುವ ಸ್ಥಿತಿಗೆ ತಲುಪುವಂತೆ ಮಾಡುತ್ತದೆ ಈ ದುಗ್ಗಾಣಿ.

ಮಾನವಾಗಿರಿಸೋದು ದುಗ್ಗಾಣಿ ಮಾನ
ಹಸಗೆಡಿಸುವುದು ದುಗ್ಗಾಣಿ ಬಹು
ಮಾನನಿಧಿ ಶ್ರೀ ಪುರಂದರ ವಿಠಲನ
ಕಾಣಿಸದಿರುವುದು ದುಗ್ಗಾಣಿಯಣ್ಣ

ದಾಸರ ಕೀರ್ತನೆಯ ಈ ಕೊನೆಯ ಮಾತುಗಳು ಮಾನ – ಅಪಮಾನಗಳಿಗೆ ಗುರಿ ಮಾಡುವ ಈ ದುಗ್ಗಾಣಿ ಮಾನ ನಿಧಿಯಾದ ವಿಷ್ಣುವಿನ ಧ್ಯಾನವನ್ನೇ ಮರೆಸುತ್ತದೆ. 'ಮುದ್ದು ಪುರಂದರವಿಠಲನ ಮರೆಸುವ ಬಿದ್ದು ಹೋಗೋ ರೊಕ್ಕವ ಸುಡು ನೀನಕ್ಕ' ಎಂಬಲ್ಲಿ ಹಣದ ಅಮಲೇರಿದವನು ದೈವವನ್ನು ಮರೆಯುತ್ತಾನೆ ದೈವ ಸಾಕ್ಷಾತ್ಕಾರದಿಂದ ದೂರನಾಗುತ್ತಾನೆ ಎಂದಿದ್ದಾರೆ.
ನವಕೋಟಿ ನಾರಾಯಣನೆನೆಸಿಕೊಂಡಿದ್ದ ಪುರಂದರದಾಸರು ಹಣದ ಲೋಭ ಕಳೆದುಕೊಂಡು ತಮ್ಮಲ್ಲಿದ್ದ ರೊಕ್ಕವನ್ನೆಲ್ಲ ದಾನ ಧರ್ಮ ಮಾಡಿ ಹರಿದಾಸರಾದ ಅವರಿಗೆ ಹಣದ ಮಹತ್ವ ತಿಳಿದಿತ್ತು. ಆದರೆ ಹಣಕ್ಕಿಂತಲೂ ಹರಿಭಕ್ತನಾಗುವುದು ಶ್ರೇಷ್ಠ ಎಂಬುದನ್ನು ಅರಿತು ಹರಿದಾಸರಾದರು. ಮಾನವ ಸಮಾಜ ರೊಕ್ಕಕ್ಕೆ ದಾಸನಾಗುವ ಬದಲು ದೈವಕ್ಕೆ ದಾಸನಾಗಬೇಕೆಂದು ತಮ್ಮ ಕೀರ್ತನೆಗಳಲ್ಲಿ ಸಾರಿದ್ದಾರೆ.

**ಶಿಶುನಾಳ ಶರೀಫ:** ಹತ್ತೊಂಬತ್ತನೇ ಶತಮಾನದ ಸಂತ ಕವಿ ತತ್ವಪದಕಾರ ಶಿಶುನಾಳ ಶರೀಫ. ತಮ್ಮ ತತ್ವಪದಗಳಿಂದಲೇ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ತೊಡಗಿದವರು. ಶರೀಫರು 'ದುಡ್ಡು ಕೆಟ್ಟದ್ದು ನೋಡಣ್ಣ' ಎಂತಲೇ ದುಡ್ಡು ಎಂಬುದು ಬಲು ಕೆಟ್ಟದ್ದು ಎಂದು ಬಲವಾಗಿ ವಾದಿಸುತ್ತಾರೆ. ಈ ತತ್ವಪದದಲ್ಲಿ ಹಣವನ್ನು ಶರೀಫರು ದುಡ್ಡು, ದುಗ್ಗಾಣಿ, ರೊಕ್ಕ, ಕಾಸು ಎಂಬ ಹಲವು ಅರ್ಥಗಳಲ್ಲಿ ಬಳಸಿದ್ದಾರೆ. ದುಡ್ಡು ಎಂಬುದು ಮನುಷ್ಯನಲ್ಲಿ ದುರಾಸೆ ಮೂಡುವಂತೆ ಮಾಡುತ್ತದೆ.

ಮರ್ಯಾದವಂತ ಮನುಷ್ಯನನ್ನು ಮಾನಗೇಡಿಯನ್ನಾಗಿ ಮಾಡುವ ಈ ದುಡ್ಡು ಬಲು ಕೆಟ್ಟದ್ದು ಎಂದು ಒತ್ತಿ ಹೇಳುತ್ತಾರೆ. ಹಣ ನಮ್ಮನ್ನು ವಿಚಾರಶೂನ್ಯರಾಗಿ ವರ್ತಿಸಲು ಪ್ರೇರೇಪಿಸುತ್ತದೆ. ದುಡ್ಡಿನ ಸಹವಾಸ ಮಾಡುವಾಗ ತುಂಬಾ ಎಚ್ಚರಿಕೆಯಿಂದ ಇರಬೇಕು ಇಲ್ಲವಾದರೆ ಅದು ನಮ್ಮನ್ನು ದಡ್ಡರನ್ನಾಗಿಸುತ್ತದೆ.

ಆಸೆ ಬಿದ್ದು ಮನದ ಮಾರಿ
ಹೊಂಟ್ಯಾಳೋ ಹುಡುಕುತ್ತಾ ನೂರೆಂಟು ಕೇರಿ
ಕಾಸು ಕಾಸನ್ನು ಹೆಕ್ಕಿ–ಮೂಳಿ
ಶಿಶುನಾಳಧೀಶನ ಮರೆತಾಳು ಸೊಕ್ಕಿ

ಮನಸ್ಸು ದುಡ್ಡಿಗೆ ಮಾರು ಹೋಗಿ ದುಡ್ಡಿನ ಹಿಂದೆ ಅಲೆಯುತ್ತದೆ. ಶರೀಫರು ಇಲ್ಲಿ ಮನವನ್ನು ಹಣದಾಸೆಗೆ ಬಲಿಯಾದ ಮಾರಿಗೆ ಹೋಲಿಸಿದ್ದಾರೆ. ದುಡ್ಡಿಗಾಗಿ ಈ ಮಾರಿ ಊರೂರು ಅಲೆಯುತ್ತ ದುಡ್ಡಿನ ಗುಲಾಮಳಾಗುತ್ತಾಳೆ. ಕಾಸಿನ ಲೋಭಕ್ಕೆ ಬಿದ್ದ ಹೆಣ್ಣು(ಮಾರಿ) ಹಣದ ಮದದಿಂದ ದೈವವನ್ನೇ ಮರೆಯುತ್ತಾಳೆ. ಪುರಂದರದಾಸರು ಮತ್ತು ಶಿಶುನಾಳ ಶರೀಫರು ದುಡ್ಡಿನ ಗುಣಾವಗುಣಗಳನ್ನು ಚಿತ್ರಿಸುತ್ತಾ ಮಾನವ ದುಡ್ಡಿಗೆ ದಾಸನಾಗುತ್ತಾನೆ. ದುರಹಂಕಾರಿಯಾಗಿ ನಂಬಿದ ದೈವವನ್ನೇ ತೊರೆದು ನಾಶವಾಗುತ್ತಾನೆ ಎಂದು ಹೇಳಿದ್ದಾರೆ.

**ದ ರಾ ಬೇಂದ್ರೆ:** ಅಂಬಿಕಾತನಯದತ್ತ ಎಂದೇ ಪ್ರಸಿದ್ಧರಾದ ಇಪ್ಪತ್ತನೇ ಶತಮಾನದ ನವೋದಯ ಕವಿ ಬೇಂದ್ರೆ. ಇವರು ಹಣವನ್ನು ಕಾಂಚಾಣವೆಂದು ಕರೆದಿದ್ದಾರೆ. ಕಾಂಚಾಣದ ಕುರುಡುತನದಿಂದಾಗಿ ಆಗುತ್ತಿರುವ ಶೋಷಣೆಯ ವಿವಿಧ ಮುಖಗಳನ್ನು ' ಕುರುಡು ಕಾಂಚಾಣ ಕುಣಿಯುತಲಿತ್ತು' ಎಂಬ ಕವಿತೆಯ ಮೂಲಕ ವ್ಯಕ್ತಪಡಿಸಿದ್ದಾರೆ.

ಕುರುಡು ಕಾಂಚಾಣ ಕುಣಿಯುತಲ್ಲಿತ್ತು
ಕಾಲಿಗೆ ಬಿದ್ದವರ ತುಳಿಯುತಲ್ಲಿತ್ತು
ಕುರುಡು ಕಾಂಚಾಣ

ಕವಿತೆಯ ಪಲ್ಲವಿಯಲ್ಲೇ ಕವಿ ಕಾಂಚಾಣಕ್ಕೆ ಕಣ್ಣಿಲ್ಲವೆಂದು ಹೇಳಿದ್ದಾರೆ. ಹಣವುಳ್ಳವರು ಕಣ್ಣಿದ್ದರೂ ಅಂತರಂಗದ ಕಣ್ಣನ್ನು ಕಳೆದುಕೊಂಡು ಅಹಂಕಾರಿಗಳಾಗಿ ತಮಗೆದುರಾಗಿ ಬಂದವರನೆಲ್ಲ ತುಳಿಯುತ್ತಾರೆ. ತಮ್ಮ ಶ್ರೀಮಂತಿಕೆಯನ್ನು ತಲತಲಾಂತರದವರಿಗೆ ಉಳಿಸಿಕೊಳ್ಳಲಿಕ್ಕಾಗಿ ಬಡವರನ್ನು, ಅಸಹಾಯಕರನ್ನು, ಅನಾಥರನ್ನು, ದಲಿತರನ್ನು ಬಳಸಿಕೊಳ್ಳುತ್ತಾರೆ. ಶ್ರೀಮಂತರ ದರ್ಪಕ್ಕೆ ಸಣ್ಣ ಕಂದಮ್ಮಗಳು, ಬಾಣಂತಿಯರು, ಕೂಲಿ ಕಂಬಳಿಯವರು, ಬಡವರು ಬಲಿಯಾಗುತ್ತಾರೆ. ಇಲ್ಲಿ ಕಾಂಚಾಣವನ್ನು ಎಲ್ಲಮ್ಮ ಜೋಗಿತಿಯ ಕುಣಿತಕ್ಕೆ ಹೋಲಿಸಲಾಗಿದೆ. ಈ ಜೋಗತಿಗೆ ಬಾಣಂತಿಯರ ಎಲುಬುಗಳೆ ಕಿರು ಗೆಜ್ಜೆಗಳಾಗಿವೆ. ಹಸಿವಿನಿಂದ ಸತ್ತ ಕಂದಮ್ಮಗಳ ಕಣ್ಣುಗಳೇ ಜೋಮಾಲೆಯಾಗಿವೆ. ಬಡವರ ಹಸಿವಿನ ಉರಿಯೇ ಪಂಜಾಗಿದೆ. ಹಸಿವಿನಿಂದ ಅಸಹಾಯಕತೆಯಿಂದ ಸತ್ತ ಕೂಲಿಯವರ ಮೈದೊಗಲೇ ಹಣೆಯ ವಿಭೂತಿಯಾಗಿದೆ. ಬಡವರ ಶೋಷಣೆಯ ಮೂರ್ತಿರೂಪವಾಗಿ ಕಾಂಚಾಣ ಕುಣಿಯುತ್ತಿದೆ. ಹಣವುಳ್ಳ ಬಂಗಲೆಗಳು, ಮಠಗಳು, ದೊಡ್ಡ ದೊಡ್ಡ ಅಂಗಡಿಗಳು ಇವುಗಳಿಗೆ ಬೆಂಬಲವಾಗಿವೆ. ಇಂತಹ ಕಾಂಚಾಣದ ಕುಣಿತಕ್ಕೂ ಕೊನೆ ಎಂಬುದಿದೆ. ಬಡವನ ಕೋಪವೇ ರೌದ್ರಾವತಾರ ತಳೆದು ಶ್ರೀಮಂತಿಕೆಯನ್ನು ಮುಳುಗಿಸುತ್ತದೆ ಎಂದು ಕವಿ ಹೇಳುತ್ತಾರೆ. ಶ್ರೀಮಂತರು ಬಡವರನ್ನು ಉದ್ಧರಿಸುವ ಬದಲು ತಮ್ಮ ಉಳಿಯುವಿಕೆಗಾಗಿ ಬಡವರನ್ನೇ ಬಲಿ ತೆಗೆದುಕೊಳ್ಳುತ್ತಾರೆ.
ಬೇಂದ್ರೆ ಅವರ ಕಾಲವು ಬ್ರಿಟಿಷರು ಭಾರತದಲ್ಲಿ ದಬ್ಬಾಳಿಕೆ ನಡೆಸುತ್ತಿದ್ದ ಕಾಲವದು. ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಭಾರತೀಯ ರೈತರಿಂದ, ಕೂಲಿಕಾರರಿಂದ ತೆರಿಗೆ ವಸೂಲಿ ಮಾಡುತ್ತಿದ್ದ ಕಾಲ. ತೆರಿಗೆ ನೀಡಿಲ್ಲವೆಂದರೆ ಮನೆಯನ್ನು ಜಪ್ತಿಮಾಡಿ ಕ್ರೂರವಾಗಿ ಹಿಂಸಿಸುತ್ತಿದ್ದ ಕಾಲ. ಭಾರತದ ಸಂಪತ್ತಿನಿಂದ ಕೊಬ್ಬಿ ಭಾರತೀಯರನ್ನೇ ಶೋಷಿಸಿ ಕ್ರೂರತೆಯನ್ನು ಮೆರೆಯುತ್ತಿದ್ದ ಕಾಲ. ಬ್ರಿಟಿಷರು ಭಾರತೀಯರ ಮೇಲೆ ನಡೆಸುತ್ತಿದ್ದ ದೌರ್ಜನ್ಯವನ್ನು ಕುರುಡು ಕಾಂಚಾಣ ಕವಿತೆಯು ದ್ವನಿಸುತ್ತದೆ. ಭಾರತದ ಸಂಪತ್ತಿನಿಂದ ಮದವೇರಿದ ಬ್ರಿಟಿಷರು ಭಾರತೀಯರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡು ನಿಸ್ಸಹಾಯಕರನ್ನಾಗಿ ನಿಶಸ್ತ್ರರನ್ನಾಗಿ ಮಾಡಿ ಕ್ರೂರತೆಯನ್ನು ಮೆರೆದರು.

ಹ್ಯಾಂಗಾರೆ ಕುಣಿ ಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲ್ಲಿ ಎತ್ತೋ.

**'ಕುರುಡು ಕಾಂಚಾಣ'** ದ ಕವಿತೆಯ ಕೊನೆ ಸಾಲುಗಳು ಶ್ರೀಮಂತಿಕೆಯಿಂದ, ಅಧಿಕಾರ ಮದದಿಂದ ಕೊಬ್ಬಿ ಕುಣಿಯುತ್ತಿರುವ ಇವರು ಕೊನೆಗೊಮ್ಮೆ ಸೋಲೊಪ್ಪಿಕೊಂಡು ಕೆಳಗೆ ಬೀಳಲೇಬೇಕು ಎಂಬುದನ್ನು ಸೂಚಿಸುತ್ತದೆ. ಹಣವುಳ್ಳವರ ವಿಚಾರಹೀನ, ಆಚಾರಹೀನ, ಸಂಸ್ಕೃತಿಹೀನ, ನಿಷ್ಕರುಣ ನಡವಳಿಕೆಯಿಂದ ತಳ ಸಮುದಾಯಗಳಿಗಾಗುತ್ತಿರುವ ಅನ್ಯಾಯವನ್ನು ಈ ಕವಿತೆ ಬಿಂಬಿಸುತ್ತದೆ. ಭಾರತವನ್ನು ವಶಪಡಿಸಿಕೊಂಡಿದ್ದ ಆಂಗ್ಲರು ಸಂಪತ್ತಿನಿಂದ ಮೆರೆದರೂ ಕೊನೆಗೊಮ್ಮೆ ಭಾರತಕ್ಕೆ ಮಣಿಯಲೇಬೇಕಾಯಿತು. ಮೇಲ್ನೋಟಕ್ಕೆ ಕವಿತೆ ಕಾಂಚಾಣದ ನರ್ತನವನ್ನು ಸೂಚಿಸುತ್ತಿದ್ದರೂ ಒಳಾರ್ಥದಲ್ಲಿ ಬಡವರ ಮೇಲಿನ ಶ್ರೀಮಂತರ ಶೋಷಣೆಯನ್ನು ಹಾಗೂ ಭಾರತೀಯರ ಮೇಲಿನ ಬ್ರಿಟಿಷರ ದಬ್ಬಾಳಿಕೆಯನ್ನು ದ್ವನಿಸುತ್ತಿದೆ.
ಒಟ್ಟಿನಲ್ಲಿ ಈ ಸಮಾಜದಲ್ಲಿ ಹಣವೇ ತುಂಬಾ ಮುಖ್ಯ ಎಂಬುದು ಎಲ್ಲಾ ಕವಿಗಳು ಒಪ್ಪಿಕೊಂಡರೂ ಹಣದಿಂದ ಆಗುವ ಅಪಾಯಗಳನ್ನು ಕೂಡ ಅಭಿವ್ಯಕ್ತಿಸಿದ್ದಾರೆ. ಹಣವೆಂಬುದು ಶ್ರೀಮಂತ ಮತ್ತು ಬಡವ ಎಂಬ ಭೇದವನ್ನು ಉಂಟು ಮಾಡಿ ಅವರಲ್ಲಿ ಮೇಲುಕೀಳಿನ ಭಾವವನ್ನು ಮೂಡಿಸುತ್ತದೆ. ಸಮಾಜ ಹಣಕ್ಕೆ ದಾಸವಾಗದೆ, ಹಣದ ನಿಯಂತ್ರಣಕ್ಕೆ ತೊಡಗಬೇಕು. ಉಳ್ಳವರು ಮತ್ತು ಇಲ್ಲದವರ ನಡುವೆ ಅಂತರ ಕಡಿಮೆಯಾಗಬೇಕು. ಹೆಚ್ಚಾಗಿ ಶ್ರೀಮಂತರು ಬಡವರನ್ನು ಶೋಷಿಸುತ್ತಾರೆ. ಸಂಪತ್ತಿನ ಸಮಾನ ಹಂಚಿಕೆಯಾಗಬೇಕೆಂಬುದು, ಹಣ ವ್ಯಕ್ತಿಗತವಾಗಲಿ ಸಾಮೂಹಿಕವಾಗಿಯಾಗಲಿ ಶೋಷಣೆಗೆ ದಾರಿ ಮಾಡಿಕೊಡದೆ ಜನರ ಕಲ್ಯಾಣಕ್ಕೆ ದಾರಿ ಮಾಡಿ ಕೊಡಬೇಕೆಂಬುದು ಇಲ್ಲಿನ ಆಶಯವಾಗಿದೆ.

**ಪರಾಮರ್ಶನ ಗ್ರಂಥಗಳು**

1. ಶಿಶುನಾಳ ಷರೀಫರ ನೂರಾರು ತತ್ವಪದಗಳು, ಅ.ರಾ.ಸೇ, ೨೦೦೯, ಕಾಮಧೇನು ಪುಸ್ತಕ ಭವನ ಬೆಂಗಳೂರು.
2. ಅರ್ಪಣ, ಮಲ್ಲೇದೇವರು ಎಚ್.ಪಿ ೧೯೮೬, ಶ್ರೀ ರಾಜೇಂದ್ರ ಪ್ರಿಂಟರ್ಸ್ ಶಿವರಾಮ್ ಪೇಟೆ ಮೈಸೂರು

3. ಬಸವಣ್ಣನವರ ವಚನಗಳು, ಬಸವರಾಜು ಎಲ್, ೧೯೫೨, ಗೀತಾ ಬುಕ್ ಹೌಸ್ ಮೈಸೂರು
4. ಪುರಂದರ ಸಾಹಿತ್ಯ ದರ್ಶನ, ರಾಮಚಂದ್ರರಾವ್ ಸಾ.ಕೃ ,೧೯೮೫, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು
5. ಸಮಗ್ರ ಬೇಂದ್ರೆ ವಿಮರ್ಶೆ, ಹೆಗಡೆ ಜಿ.ಎಂ., ೨೦೨೫, ಸಾಹಿತ್ಯ ಪ್ರಕಾಶನ ಬೆಂಗಳೂರು